1155

ಬೆಂಗಳೂರು ಡಿವೀರ್ಜ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1903—1904ನೆ ಇಸವಿ ಅರ್ಜೀ ನಂಬರ್ 429.

ಮೃತಪಟ್ಟ T. ವೆಂಕಟಾಚಲೈಯ್ಯ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಹೊಸೂರಿನಲ್ಲಿ ಇರುವ ಸುಬ್ಬಯ್ಯ ಮೈನರ್, ಗಾರ್ಡಿಯರ್ ತಾಯಿ ರಾಮಕ್ಕನವರು, ಮೃತಪಟ್ಟ ಸದರೀ T. ವೆಂಕಟಾಚಲೈಯ್ಯನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ T. ವೆಂಕಟಾಚಲೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಯ್ಯ ಮೈನರ್, ಗಾರ್ಡಿಯರ್ ತಾಯಿ ರಾಮಕ್ಕ ಎಂಬುವರ ಅರ್ಜಿಯನ್ನು ಸ್ಯ 1904ನೆ ಇಸವಿ ಸೆಪ್ಟಂಬರು ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ T. ವೆಂಕಟಾಚಲೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1904ನೆ ಇಸವಿ ಜುಲೈ ತಿಂಗಳು 13ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1904—1905ನೆ ಇಸವಿ ವಿ!! ಅರ್ಜೀ ನಂಬರ್ 1.

ಶಿವಮೊಗ್ಗದಲ್ಲಿ ವಾಸವಾಗಿದ್ದು ಮೃತಪಟ್ಟ ಸಿ. ಎಲ್. ರಾತಪ್ಪಸ್ವಾಮಿ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸಿ. ಎ. ಲಕ್ಷ್ಮಣಸ್ವಾಮಿ ಮೊದಲಿಯಾರ್ರು, 2ನೆ ಇವನ ಮಗ ಸಿ. ರಾಜಗೋಪಾಲ ಮೊದಲಿಯಾರ್, ಮದ್ರಾಸ್ ಬ್ಯಾಕ್‌ಟವರ್ಡ್ ಸ್ಟ್ರೀಟ್ ನಂಬರು 4ನೆ ಮನೆ, ಮೃತಪಟ್ಟ ಸದರೀ ರಾಮಸ್ವಾಮಿ ಮೊದಲಿಯಾರ್ರಿಗೆ 1ನೆ ಯವನು ತಂದೆಯಾಗಿಯೂ, 2ನೆ ಯವನು ತಮ್ಮನಾಗಿಯೂ ಆಗಬೇಕೆಂಬ ಹಕ್ಕುದಾರಿಮೇಲೆ ಮದ್ರಾಸ್ ಸ್ಥಳದ 1–2ನೆ ಅರ್ಜೀದಾರ್ರು ಶಿವಮೊಗ್ಗದಲ್ಲಿ ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮಿ ಮೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ರೂ. 4,895—9—4 ಸಾಲವನ್ನು ವಸೂಲ್ಮಾಡುವದಕ್ಕೆ ಸ್ಯ 1901ನೆ ಇಸವಿ VIIನೆ ರೆಗ್ಯುಲೇಷ್ಯ ಮೇರೆಗೆ ಸರಟಿಫಿಕೇಟ್ ಬಿಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಲಕ್ಷ್ಮಣಸ್ವಾಮಿ ಮೊದಲಿಯಾರ್, 2ನೆ ರಾಜಗೋಪಾಲ ಮೊದಲಿಯಾರ್ರ ಅರ್ಜಿಯನ್ನು ಸ್ಯ 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿ. ಎಲ್. ರಾಮಸ್ವಾಮಿ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1904ನೆ ಇಸವಿ ಜುಲೈ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವೆಂಕಟವರದ ಐಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ಮೈಸೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1903—1904ನೆ ಇಸವಿ ಅರ್ಜೀ ನಂಬರ್ 578.

ಮೃತಪಟ್ಟ ಕೆಂಪಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ತಿರುಮಕೂಡ್ಲು ನರಸೀಪುರದ ತಾಲ್ಲೂಕು ತಲಕಾಡು ಹೋಬಳಿ ತಡಿಮಾಲಂಗಿ ಗ್ರಾಮದಲ್ಲಿರುವ ವೀರಶೈವ ಮತದ ಕೆಂಪಣ್ಣನವರ ಮಕ್ಕಳು 1ನೆ ರಾಮಯ್ಯ, 2ನೆ ಚಿಕ್ಕಣ್ಣ ಮೈನರ್, ಗಾರ್ಡಿಯರ್ ವಾರಿದೇವರು, ಮೃತಪಟ್ಟ ಸದರೀ ಕೆಂಪಣ್ಣನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ತಲಕಾಡು ಹೋಬಳಿ ತಡಿಮಾಲಂಗಿ ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ಕೆಂಪಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೀರಭದ್ರಪ್ಪಯ್ಯನವರ ಅರ್ಜಿಯನ್ನು ಸ್ಯ 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1904ನೆ ಇಸವಿ ಜುಲೈ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ಯ 1903—1904ನೆ ಇಸವಿ ಅರ್ಜೀ ನಂಬರ್ 586.

ಮೃತಪಟ್ಟ ಪಳ್ಳಾಚಿ ರಾಘವೇಂದ್ರರಾಯರ ಆಸ್ತೀ ವಿಷಯದಲ್ಲಿ —

ಅರ್ಜೇದಾರ್ರು ಮೈಸೂರು ಹೌಲಗ್ರಹಾರದಲ್ಲಿರುವ ನಕರಾರು ರಾಮರಾಯರ ಮಗಳು ಲಕ್ಷ್ಮಂಬಾಯಿ, ಮೃತಪಟ್ಟ ಸದರೀ ಪಳ್ಳಾಚಿ ರಾಘವೇಂದ್ರರಾಯರ್ ಪಂಚತಿ ಆಗಬೇಕೆಂಬ ಹಕ್ಕುದಾರಿಮೇಲೆ ನಂಜನಗೂಡು ತಾಲ್ಲೂಕಿನ ಕಸಬಾದಲ್ಲಿ ವಾಸಸ್ಥರಾಗಿ ಮೃತಪಟ್ಟ ಪಳ್ಳಾಚಿ ರಾಘವೇಂದ್ರರಾಯರ ಜೀಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟೆ ಬ್ಯೆಸ್ಕೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ವಿರುದ್ಧಾದಾರರಾದ ಮೇಲ್ಕಂಡವರ ಅಬ್ಜೆಕ್ಷನ್ನು ಸ್ಯ 1904ನೆ ಇಸವಿ ಆಗಸ್ಟು 3ಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟು ವಿಷಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಪಳ್ಳಾಚಿ ರಾಘವೇಂದ್ರರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1904ನ ಇಸವಿ ಜುಲೈ 3ಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿ ನಮ್ಮ ದಸ್ತಖತ್ತೊಡನೆ ಕೊಡೋ ಣಾಗಿದೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ್.

ದೊಡ್ಡಬಳ್ಳಾಪುರದ ಮುನ್ಸೀಫ್ ಕೋರ್ಟಿನಲ್ಲಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, —

1903—1904ನೆ ಇಸವಿ ಅಸಲ್ ನಂಬರ್ 678.

ವಾದಿ.	ಪ್ರತಿವಾದಿಗಳು.
ದೊಡ್ಡಬಳ್ಳಾಪುರದ ಕಸಬಾದಲ್ಲಿರುವ ಅರ್ಚಕ ಗುಂಡಪ್ಪನ ಮಗ ಶ್ರೀಕಂಠೈಯ್ಯ.	ದೊಡ್ಡಬಳ್ಳಾಪುರದ ಕಸಬಾದಲ್ಲಿರುವರುಗಳು. 1ನೆ ದಾನಪ್ಪ ಶೆಟ್ಟಿ. 2ನೆ ಅಮಾಶಿ ನಂಜುಂಡಪ್ಪ. 3ನೆ ದಾನಪ್ಪನವರ ಪಾಪಣ್ಣ. 4ನೆ ವನಪ್ಪನಹಳ್ಳಿ ಮುಲ್ಲಯ್ಯ ವಗೈರೆ.

ಮೇಲ್ಕಂಡ ಮೊಕದ್ದಮಾದಲ್ಲಿ ವಾದಿಯು.

(1) ದೊಡ್ಡ ಬಳ್ಳಾಪುರದಲ್ಲಿರುವ ಶ್ರೀ ರಾಮಲಿಂಗ ಚವುಡೇಶ್ವರಿ ದೇವಸ್ಥಾನಕ್ಕೆ ವಾದಿಯು ಪಾರಂಪರ್ಯವಾದ ಹಕ್ಕುದಾರನೆಂದು ಸ್ಥಾಪಿಸಿ 4ನೆ ಪ್ರತಿವಾದಿಯನ್ನು ಸದರಿ ಕೆಲಸದಿಂದ ನಿವರ್ತಿಮಾಡಿ ವಾದಿ ಸ್ವಾಧೀನಕ್ಕೆ ಸಲ್ಲಿಕರಿ ಕೊಡಿಸಬೇಕು.

(2) ವಾದಿಯು ಹಕ್ಕು ಸ್ವಾಧೀನದ ವಿಷಯದಲ್ಲಿ ಪ್ರತಿವಾದಿಗಳು ಅವರ ಗುಂಪಿಗೆ ಸಮ್ಬಂಧಪಟ್ಟ ಎಲ್ಲಾ ಜನಗಳು ಮತ್ತು ಅದೇ ವಿಷಯದಲ್ಲಿ ಸಮ್ಬಂಧವುಳ್ಳವರು ಯಾವಾಗಲು ಪ್ರಶ್ನೆಸದೆ ಅಥವಾ ಅಡ್ಡಿಮಾಡದೆ ಇರುವಂತೆ ಆಟುಂಕಪಡಿಸದಂತೆ ಇಂಜೆಕ್ಷೆನ್ ಕೊಡಿಸಬೇಕು.

(3) 1ನೆ ಪ್ರತಿವಾದಿ ಮತ್ತು 6 ಆರು ಜನಗಳ ಕೃತ್ಯದಿಂದ ವಾದಿಗೆ ಉಂಟಾದ 3 ಮೂರು ಸರುಷಗಳ ನಷ್ಟದ ಪರಿವರ್ತನೆಗಾಗಿ 225—0—0 ರೂಪಾಯಿ ಮತ್ತು ಕೋರ್ಟುಖರ್ಚು ಮತ್ತು ಕೋರ್ಟಿನವರಿಗೆ ಯುಕ್ತವಾಗಿ ತೋರುವ ಇತರ ಪರಿಹಾರಗಳೊಡನೆ ಡಿಕ್ರಿ ಕೊಡಿಸಬೇಕೆಂದು ದಾವಾ ದಾಖಲ್ ಮಾಡಿರುತ್ತಾನೆ. ಸದರಿ ಮೊಕದ್ದಮೆ ಇಪ್ಯೂ ಒಗ್ಗೆ 1904ನೆ ಇಸವಿ ಜುಲೈ 30ನೆ ತಾರೀಖಿಗೆ ಹೀರಿಂಗು ಇಡಲ್ಪಟ್ಟಿರುತ್ತೆ. ಈ ಮೊಕದ್ದಮೆದಲ್ಲಿ ಹಕ್ಕುಳ್ಳ ಸಮಸ್ತ ಜನಗಳು ಮೇಲ್ಕಂಡ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ತಮ್ಮ ತಮ್ಮ ಹಕ್ಕಿನ ವಿಷಯವನ್ನು ಕುರಿತು ಆಗಲಿ ಅಥವಾ ಸದರಿಯವರ ದಾವಾಕ್ಕೆ ಡಿಫೆನ್ಸಾಗಲಿ ಹಾಜರ್ಮಾಡತಕ್ಕದ್ದಿದೆ.

ಟಿ. ವೆಂಕೋಬರಾವ್,
ಮುನ್ಸೀಫ್.

ನೋಟಿಸ್.

ನಂಜನಗೂಡು ಮುನ್ಸೀಫ್ ಕೋರ್ಟಿನಲ್ಲಿ.

ತಾರೀಖು 13ನೆ ಜುಲೈ 1904.

1903—04ನೆ ಇಸವಿ O. S. No. 899.

ವಾದಿ.	ಪ್ರತಿವಾದಿಗಳು.
ಯಳಂದೂರು ತಾಲ್ಲೂಕು ಜೋಡಿ ಗುಂಬಳ್ಳಿಯಲ್ಲಿರುವ ಆ ಗ್ರಾಮದ ಪಜಂಟು ನರಸಿಂಹ ಉಪಾಧ್ಯರು.	1. ಯಳಂದೂರು ತಾಲ್ಲೂಕು ವಡಗೆರೆ ಗ್ರಾಮದಲ್ಲಿ ವಾಸವಾಗಿರುವ ಕಲ್ಲುವಡ್ಡರ ಜಾತಿ ಮುದ್ದಾಬೋಯಿ. 2. ರುದ್ರಾಬೋಯಿ.

ಇದರಿಂದ ಜೋಡಿ ಗುಂಬಳ್ಳಿ ಗ್ರಾಮದ ಒಳಿಡಿದಾರರಾದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ : —

ಪ್ರತಿವಾದಿ ಮುದ್ದಾಬೋಯಿ, ರುದ್ರಾಬೋಯಿ ಇವರುಗಳು ಜೋಡಿ ಗುಂಬಳ್ಳಿ ಗ್ರಾಮಕ್ಕೆ ಕೀರದ ಜರ್ಮಾಗಳ ಪೈಕಿ ಸರ್ವೆ ನಂಬರು 185, 186, 187, 218 ಲಗಾಯಿತು ಜೋಡಿದಾರ್ರಿಗೆ ಕ್ರಯ ಅವರ ಸ್ವಾಧೀನಾನುಭವದಲ್ಲಿರುವ ನಂಬರುಗಳ ಪೈಕಿ 1ನೆನ ಸರ್ವೆ ನಂಬರಲ್ಲಿ ಇರುವ ಮಾಕನಅರೆ ಎಂಬ ಗುಡ್ಡದಲ್ಲಿ ಪ್ರತಿವಾದಿಗಳು ಅಕ್ರಮವಾಗಿ 15—10—1903ರ ಲಾ|| ಮೊಡ್ಡಿ ಚಪ್ಪಡಿಗಳು ಮತ್ತು ಬಂಗಲೆ ಗೋಡೆಗೆ ಲಾಯಕ್ಕಾದ ಕಲ್ಲುಗಳನ್ನು ವಡಿಯುತ್ತಾ ಇರುವದಲ್ಲದೆ ಸುಮಾರು 20 ಗಾಡಿ ಕಲ್ಲುಗಳ ಬಣ್ಣ ಸಾಗಿಸಿ ಬರುತ್ತಾರಂತಲೂ ಇದಕ್ಕಾಗಿ ದ್ಯಾವೇಜು 20—0—0 ರೂಪಾಯಿಗಳು ಕೋರ್ಟುಖರ್ಚು ಸಹ ಬರಬೇಕಂತಲೂ ಮೇಲ್ಕಂಡ ಪಜಂಟು ನರಸಿಂಹ ಉಪಾಧ್ಯರು ದಾವಾ ಮಾಡಿದ್ದಾರೆ ಸದರಿ ಜೋಡಿ ಗುಂಬಳ್ಳಿ ಗ್ರಾಮಕ್ಕೆ ಇನಾಂದಾರರಾಗಿ ಸಕ್ಕ ಬಾಕಿತ್ತೆ ಇರತಕ್ಕ ಸಮಸ್ತರೂ 29—7—1904ನೆ ಮಂಗಳವಾರ ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಯು ಹಾಜರಾಗಿ ಈ ಮೊಕದ್ದಮೆಕ್ಕೆ ಪಕ್ಷಿಗಾರರಾಗಿ ಕೀರಬೇಕಾದು.

ಎಸ್. ಶೇಷಗಿರಿರಾವ್,
ಮುನ್ಸೀಫ್.

Mysore Government Central Press, Bangalore.—1904.